ಇಂದು ದಿನಾಂಕಃ 22.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ. ಆರ್.ಸಿ.ಎಸ್. ವಕೀಲರಿಂದಃ

ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ.

| ಕ್ರ. ಸಂಖ್ಯೆಃ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | 2 ನೇ ವಾದಿಯ ಲಿವಿಂಗ್ ಸರ್ಟಿಫಿಕೇಟ್ | ನಿಪಿ-11 |
| 2. | 2 ನೇ ವಾದಿಯ ಮಕ್ಕಳ ಜನನ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳು | ನಿಪಿ-12 ಮತ್ತು 13 |
| 3. | 3 ನೇ ವಾದಿಯ ಮಗಳ ಜನನ ಪ್ರಮಾಣ ಪತ್ರದ ದೃಢೀಕೃತ ಪ್ರತಿ | ನಿಪಿ-14 |
| 4. | ವಾದಿಯರ 3 ಆಧಾರ ಕಾರ್ಡ್‌ಗಳು | ನಿಪಿ-15 ರಿಂದ 17 |

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ. ಕೆ.ಬಿ.ಬಿ. ವಕೀಲರಿಂದಃ

1. ನನ್ನ ಜನ್ಮ ದಿನಾಂಕಃ 15.12.1978. ನಾನು 1995 ರಲ್ಲಿ ಎಸ್.ಎಸ್.ಎಲ್.ಸಿ., ಮುಗಿಸಿರುತ್ತೇನೆ. ನನಗೆ ಇಬ್ಬರು ಗಂಡು ಮಕ್ಕಳು, ಹೆಣ್ಣು ಮಕ್ಕಳು ಇರುವುದಿಲ್ಲ. 3 ನೇ ವಾದಿಯ ಜನ್ಮ ದಿನಾಂಕಃ 20.05.1981 ಹಾಗೂ 1 ನೇ ವಾದಿಯ ಜನ್ಮ ದಿನಾಂಕಃ 20.03.1977. 1 ಹಾಗೂ 3 ನೇ ವಾದಿಯರ ಜನ್ಮ ಪ್ರಮಾಣ ಪತ್ರ ಹಾಜರುಪಡಿಸಲು ತೊಂದರೆ ಇರಲಿಲ್ಲ. ನನ್ನ ಮದುವೆ 10.03.1996 ರಲ್ಲಿ ಆಗಿರುತ್ತದೆ. ಆ ಕಾಲಕ್ಕೆ ನನ್ನ ವಯಸ್ಸು 16-17 ಇತ್ತು. ನನ್ನ ಮಕ್ಕಳ ಜನನ ಹುಬ್ಬಳ್ಳಿಯಲ್ಲಿ ಆಗಿರುತ್ತದೆ. ಸಾಮಾನ್ಯವಾಗಿ ಮೊದಲನೆ ಹೆರಿಗೆ ತವರು ಮನೆಯಲ್ಲಿ ಆಗುತ್ತದೆ ಎಂದರೆ ಸರಿ. 3 ನೇ ವಾದಿಯ ಮಗಳ ಜನನ ಹುಬ್ಬಳ್ಳಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಆಸ್ಪತ್ರೆಯಲ್ಲಿ ಹೆರಿಗೆ ಆಗಿರುವುದರಿಂದ ತುಂಬಾ ಖರ್ಚು ಬಂದಿರುತ್ತದೆ ಎಂದರೆ ಸಾಕ್ಷಿಯು ಅದು ಸರ್ಕಾರಿ ಆಸ್ಪತ್ರೆ ಎಂದು ನುಡಿಯುತ್ತಾರೆ. ಮಕ್ಕಳಾದಾಗ ತೊಟ್ಟಿಲು ಕಾರ್ಯ ಇತ್ಯಾದಿ ಎಂದು ತಂದೆ ತಾಯಿಗಳಿಗೆ ತುಂಬಾ ಖರ್ಚು ಬಂದಿರುತ್ತದೆ ಎಂದರೆ ಸಾಕ್ಷಿಯು ಅಷ್ಟೊಂದು ಖರ್ಚಾಗಿಲ್ಲ, ಅಲ್ಪ ಸ್ವಲ್ಪ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಹಾಗೂ 3 ನೇ ವಾದಿಯ ಮದುವೆ ಹಾಗೂ ಹೆರಿಗೆ ಖರ್ಚುಗಳನ್ನು ತಂದೆ ತಾಯಿಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಕರ್ತವ್ಯ ಎಂದು ನುಡಿಯುತ್ತಾರೆ. 1 ನೇ ವಾದಿಯು ಸಹ ಹುಬ್ಬಳ್ಳಿಯಲ್ಲೇ ವಾಸವಾಗಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.